**ಘನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ತಿ.ನರಸೀಪುರ**

**ಅಸಲು ದಾವಾ ಸಂಖ್ಯೆ. 260/2025**

ವಾದಿ : ಸುನಂದ

**ವಿರುದ್ಧ**

ಪ್ರತಿವಾದಿಗಳು : ಸಿದ್ದೇಗೌಡ ಮತ್ತು ಇತರರು

| | | |
|---|---|---|
| ಸಾಕ್ಷಿದಾರರ ಹೆಸರು | : | ಸುನಂದ |
| ಗಂಡನ ಹೆಸರು | : | ರಾಜೇಗೌಡ |
| ತಂದೆಯ ಹೆಸರು | : | ಕುಂಡನಸಿದ್ದನ ಕುನ್ನಣ್ಣನ ಮಾದೇಗೌಡ |
| ವಯಸ್ಸು | : | ಸುಮಾರು 60 ವರ್ಷಗಳು |
| ವೃತ್ತಿ | : | ಗೃಹಿಣಿ |
| ವಾಸ | : | ತ್ಯಾಗರಾಜಮೊಹಲ್ಲಾ, ಬನ್ನೂರು ಟೌನ್, ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. |

NOTARY
LINGANNA. N.L.
T. NARASIPURA
REVENUE TALUK
MYSURU DIST.
Reg. No. Law. LCU74/2022
Expiry Date : 3-3-2029
GOVERNMENT OF KARNATAKA

**ಪ್ರಮಾಣ ಪತ್ರದ ಮೂಲಕ ವಾದಿಯ ಮುಖ್ಯ ವಿಚಾರಣೆ**

ಮೇಲ್ಕಂಡ ಪ್ರಕರಣದ ವಾದಿ **ಸುನಂದ** ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣೀಕರಿಸುವುದೇನೆಂದರೆ,

1. ನನಗೆ ಪ್ರತಿವಾದಿಗಳು ಅಣ್ಣಂದಿರಾಗಬೇಕು. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿರುತೇವೆ. ದಾವಾ ಷೆಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತ ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು, ನನ್ನ ಮತ್ತು ಪ್ರತಿವಾದಿಗಳ ಜಂಟಿ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿದೆ. ಈವರೆಗೂ ಗಡಿ ಗುರ್ತಿಸಿ ಭಾಗವಾಗಿರುವುದಿಲ್ಲ. ಸದರಿ ಸ್ವತ್ತುಗಳ ಮೇಲೆ ನನಗೆ ಮತ್ತು ಪ್ರತಿವಾದಿಗಳಿಗೆ 1/5 ಭಾಗದ ಹಕ್ಕಿದೆ. ದಾವಾ ಷೆಡ್ಯೂಲ್ ಸ್ವತ್ತುಗಳ ಐಟಂ. ನಂ.2 ರ ಖಾತೆಯು 2ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.3 ರ ಖಾತೆಯು 3ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.4 ರ ಖಾತೆಯು 4ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.6 ರ ಖಾತೆಯು 2ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.8 ರ ಖಾತೆಯು 3ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.9 ರ ಖಾತೆಯು 4ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.10 ರ ಖಾತೆಯು 2ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.11 ರ ಖಾತೆಯು 1 ರಿಂದ 4ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ. ಐಟಂ. ನಂ.12 ರ ಖಾತೆಯು 4ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.13 ರ ಖಾತೆಯು 3ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.14 ರ ಖಾತೆಯು 2ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.15 ರ ಖಾತೆಯು 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.16 ರ ಖಾತೆಯು 3ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.17 ರ ಖಾತೆಯು 1ನೇ ಪ್ರತಿವಾದಿಯ

ಹೆಸರಿನಲ್ಲಿರುತ್ತದೆ. ಐಟಂ. ನಂ.18 ರ ಖಾತೆಯು 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.19 ರ ಖಾತೆಯು 3ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಐಟಂ. ನಂ.20 ರ ಖಾತೆಯು 4ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ.

2. ನಾನು ಮುಂದುವರಿದು ಸಾಕ್ಷ್ಯನುಡಿಯುವುದೇನೆಂದರೆ, ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಪ್ರತಿವಾದಿಗಳನ್ನು ದಿನಾಂಕ: 12-04-2024 ರಂದು ಭಾಗವನ್ನು ಕೇಳಿದಾಗ ಈಗ ಆಗ ಎಂದು ಸಬೂಬು ಹೇಳಿದರು. ನಂತರ ಇದಕ್ಕೆ ಸಂಬಂಧಿಸಿದಂತೆ ನ್ಯಾಯ ಪಂಚಾಯಿತಿ ನಡೆದರು ಯಾವುದೇ ಪ್ರಯೋಜನವಾಗಿರುವುದಿಲ್ಲ. ಈ ಕಾರಣ ನಾನು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ನನ್ನ ಭಾಗಾಂಶವನ್ನು ನೀಡುವಂತೆ ಪ್ರತಿವಾದಿಗಳಿಗೆ ದಿನಾಂಕ: 17-05-2024 ರಂದು ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತೇನೆ. 1, 2 ಮತ್ತು 4ನೇ ಪ್ರತಿವಾದಿಗಳಿಗೆ ಸದರಿ ತಿಳುವಳಿಕೆ ಪತ್ರವು ಜಾರಿಯಾಗಿರುತ್ತದೆ. 3ನೇ ಪ್ರತಿವಾದಿಯು ಜಾರಿಯ ವೇಳೆಯಲ್ಲಿ ಗೈರು ಹಾಜರಾದ ಕಾರಣ ಜಾರಿಗೆ ಅವಕಾಶ ನೀಡಿರುವುದಿಲ್ಲ. ಹಾಗಾಗಿ ನನ್ನ ವಕೀಲರಿಗೆ ವಾಪಸ್ಸು ಬಂದಿರುತ್ತದೆ. ಜಾರಿಯಾದ ಪ್ರತಿವಾದಿಗಳು ಜವಾಬನ್ನು ನೀಡಿರುವುದಿಲ್ಲ ಅಥವಾ ಭಾಗವನ್ನು ಸಹ ನೀಡಿರುವುದಿಲ್ಲ. ಅದಕ್ಕಾಗಿ ನಾನು ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಈ ದಾವೆಯನ್ನು ದಾಖಲು ಮಾಡಿರುತ್ತೇನೆ. ತಿಳುವಳಿಕೆ ಪತ್ರವನ್ನು ಕಳುಹಿಸಿದ ನಂತರ ದಾವಾ ಷೆಡ್ಯೂಲ್ ಐಟಂ. ನಂ.13 ರಿಂದ 20 ರವರೆಗಿನ ಮಾಹಿತಿಯು ಲಭ್ಯವಾದ ಕಾರೆಣ ಅದನ್ನು ಸಹ ದಾವಾದಲ್ಲಿ ಸೇರಿಸಲಾಗಿದೆ.

3. ನಾನು ಘನ ನ್ಯಾಯಾಲಯದ ಅವಗಾಹನೆಗಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸಿಕೊಳ್ಳಲು ಅನುಮತಿ ಕೋರುತ್ತೇನೆ.

ಆದ್ದರಿಂದ ಘನ ನ್ಯಾಯಾಲಯವು ನ್ಯಾಯಹಿತ ದೃಷ್ಟಿಯಿಂದ ನಾನು ದಾವೆಯಲ್ಲಿ ಕೇಳಿಕೊಂಡಿರುವಂತೆ ನನ್ನ ಪರವಾಗಿ ತೀರ್ಪು ಮತ್ತು ಡಿಕ್ರಿಯನ್ನು ದಯಪಾಲಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಮೇಲ್ಕಂಡ ಎಲ್ಲಾ ಸಂಗತಿಗಳು ಸತ್ಯವಾಗಿದೆ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಈ ಪ್ರಮಾಣ ಪತ್ರಕ್ಕೆ ನನ್ನ ರುಜು ಮಾಡಿರುತ್ತೇನೆ.

ಘೋಷಿಸುವವರು/ವಾದಿ

ಗುರುತಿಸುವವರು

H. N. B.

ವಕೀಲರು
ದಿನಾಂಕ : 22-06-2026
ಸ್ಥಳ : ತಿ.ನರಸೀಪುರ

NOTARY
LINGANNA. N.L.
T. NARASIPURA
REVENUE TALUK
MYSURU DIST.
Reg. No. Law. LCL/74/2022
Expiry Date : 3-...-2029
GOVERNMENT OF KARNATAKA

Solemnly Affirmed & Declared
Before me on 22/6/2026

Notary, T. Narasipura

No of Corrections NIL

**ಸಾಕ್ಷಿಗೆ ದಿನಾಂಕಃ 22.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಹೆಚ್.ಎನ್.ಬಿ.ಎನ್. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

ಸರ್ವೆ ನಂ.11/3ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.;ಪಿ.1 ಎಂದು, ಸರ್ವೆ ನಂ.11/10ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.;ಪಿ.2 ಎಂದು, ಸರ್ವೆ ನಂ.11/11ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.;ಪಿ.3 ಎಂದು, ಸರ್ವೆ ನಂ.11/12ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.4 ಎಂದು, ಸರ್ವೆ ನಂ.37/4ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.5 ಎಂದು, ಸರ್ವೆ ನಂ.19/15ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.6 ಎಂದು, ಸರ್ವೆ ನಂ.2/12ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.7 ಎಂದು, ಸರ್ವೆ ನಂ.37/9ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.8 ಎಂದು, ಸರ್ವೆ ನಂ.37/10ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.9 ಎಂದು, ಸರ್ವೆ ನಂ.37/11ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು.

ಸರ್ವೆ ನಂ.36/1ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.11 ಎಂದು, ಸರ್ವೆ ನಂ.36/2ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.12 ಎಂದು, ಸರ್ವೆ ನಂ.36/3ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.13 ಎಂದು, ಸರ್ವೆ ನಂ.36/4ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.14 ಎಂದು, ಸರ್ವೆ ನಂ.36/5ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.15 ಎಂದು, ಸರ್ವೆ ನಂ.2/20ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.16 ಎಂದು, ಸರ್ವೆ ನಂ.2/21ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.17 ಎಂದು, ಸರ್ವೆ

22/6/26

ನಂ.19/17ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.18 ಎಂದು, ಸರ್ವೆ ನಂ.19/18ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.19 ಎಂದು, ~~ಸರ್ವೆ ನಂ.19/18ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.19 ಎಂದು,~~ ಸರ್ವೆ ನಂ.19/19ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.20 ಎಂದು, ಕಛೇರಿಯ ಲೀಗಲ್ ನೋಟಿಸ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.21 ಎಂದು, 4 ಆರ್.ಪಿ.ಎ.ಡಿ. ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.22 ಎಂದು, 3 ಆರ್.ಪಿ.ಎ.ಡಿ. ಸ್ವೀಕೃತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.23 ಎಂದು, 1 ಪೋಸ್ಟಲ್ ಕವರ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.24 ಎಂದು ಗುರುತಿಸಲಾಯಿತು.

(ಪ್ರತಿವಾದಿ ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

22/11/24

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**

ಟಿ.ಎಂ.ದ